ಅಧ್ಯಕ್ಷರು : ಇಲ್ಲ, ಮಾನ್ಯ ಸಚಿವರು ಈಗ ಬಿಜಾಪುರದಲ್ಲಿ ಫುಡ್ ಪಾರ್ಕ್ ಮಾಡುತ್ತೀರಾ?

ಶ್ರೀ ಕಟ್ಟಾ ಸುಬ್ರಹ್ಮಣ್ಯ ನಾಯ್ಡು : ಈಗ ಟೆಂಡರ್ ಆಹ್ವಾನ ಮಾಡಿದ್ದೇವೆ ಪರಿಶೀಲನೆ ಮಾಡಿ ಕ್ರಮ ತೆಗೆದುಕೊಳ್ಳುತ್ತೇವೆ.

ಅಧ್ಯಕ್ಷರು : ಆಯಿತು.

ದೊಡ್ಡ ಬಳ್ಳಾಪುರ ಉಪ ವಿಭಾಗದಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಭೂ ನೋಂದಣಿ.

200 (1063) ಶ್ರೀ ನರಸಿಂಹಸ್ವಾಮಿ. ಜೆ. (ದೊಡ್ಡಬಳ್ಳಾಪುರ): ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಬೆಂಗಳೂರು ಗ್ರಾಮಾಂತರ ಜಿಲ್ಲೆಯ ದೊಡ್ಡಬಳ್ಳಾಪುರ ಉಪ ವಿಭಾಗದಲ್ಲಿ 2004–05 ಮತ್ತು 2005–06ರ ಸಾಲಿನಲ್ಲಿ ನಡೆದಿರುವ ಭೂ ನೋಂದಣಿಗಳು ಎಷ್ಟು;

ಆ) ಇವುಗಳಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಹಾಗೂ ಇತರೆ ವರ್ಗದವರ ಜಮೀನುಗಳನ್ನು ಸರ್ಕಾರದಿಂದ ಮಂಜೂರಾತಿ ಪಡೆದು ಮಾರಾಟ ಮಾಡಿರುವ ಜಮೀನುಗಳ ವಿಸ್ತೀರ್ಣ ಮತ್ತು ಸರ್ವೆ ನಂಬರುಗಳ ವಿವರಗಳೇನು?

ಶ್ರೀ ಜಗದೀಶ್ ಶೆಟ್ಟರ್ (ಕಂದಾಯ ಸಚಿವರು) :

ಅ) ಭೂ ನೋಂದಣಿಗಳ ಸಂಖ್ಯೆ

2004–05 ... 19,843

2005–06 ... 21,453

ಆ) ಬೆಂಗಳೂರು ಗ್ರಾಮಾಂತರ ಜಿಲ್ಲೆ, ದೊಡ್ಡಬಳ್ಳಾಪುರ ಉಪವಿಭಾಗದ ವ್ಯಾಪ್ತಿಯಲ್ಲಿ ಬರುವ ಈ ಕೆಳಕಂಡ 4 ತಾಲ್ಲೂಕುಗಳಲ್ಲಿ 2004–05 ಮತ್ತು 2005–06ನೇ ಸಾಲಿನಲ್ಲಿ ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡ ಮತ್ತು ಇತರೆ ವರ್ಗದವರಿಗೆ ಮಂಜೂರಾಗಿದ್ದಂತಹ ಜಮೀನುಗಳನ್ನು ಮಾರಾಟ ಮಾಡಲು ಅನುಮತಿ ನೀಡಿದ ತಾಲ್ಲೂಕುವಾರು ವಿವರಗಳು ಈ ಕೆಳಕಂಡಂತಿದೆ.

ತಾಲ್ಲೂಕು ಹೆಸರು	2004–05			2005–06		
	ಪ.ಜಾ /ಪ.ಪಂ ಎ.ಗು.	ಇತರೆ ಎ.ಗು.	ಒಟ್ಟು ಎ.ಗು.	ಪ.ಜಾ /ಪ.ಪಂ ಎ.ಗು.	ಇತರೆ ಎ.ಗು	ಒಟ್ಟು ಎ.ಗು.
ದೊಡ್ಡಬಳ್ಳಾಪುರ	22–02	23–24	45–26	59–13	32–23	91–36
ಹೊಸಪೇಟೆ	6–22	10–02	16–24	22–00	10–33	32–33
ದೇವನಹಳ್ಳಿ	48–19	26–31	75–10	86–28	95–00	181–28
ನೆಲಮಂಗಲ	–	–	–	23–37	9–03	33–00
ಒಟ್ಟು	77–03	60–00	137–20	191–38	147–19	339–17

ತಾಲೂಕುವಾರು, ಗ್ರಾಮ, ಸರ್ವೆ ನಂ. ವಿಸ್ತೀರ್ಣಗಳ ವಿವರಗಳ ತಃಖ್ತೆ ಲಗತ್ತಿಸಿದೆ.

ದೊಡ್ಡಬಳ್ಳಾಪುರ ತಾಲ್ಲೂಕಿನಲ್ಲಿ ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡ ಮತ್ತು ಇತರೆ ಜನಾಂಗದ ಜಮೀನುಗಳನ್ನು ಸರ್ಕಾರದಿಂದ ಮಂಜೂರಾತಿ ಪಡೆದಿರುವ ವಿವರ

(2004-05 ಹಾಗೂ 2005-06)

ಕ್ರ. ಸಂ.	ಗ್ರಾಮದ ಹೆಸರು	ಸರ್ವೆ ನಂ.	ಪ.ಜಾತಿ/ ಪ.ಪಂ (ಎ.ಗುಂಟೆ)	ಇತರೆ ಷರಾ (ಎ.ಗುಂಟೆ)
		2004-05		
1	ಹೊಸಹುಡ್ಡೆ	26	0–20	–
2	ಕನ್ನಮಂಗಲ	53	1–12	–
3	ಶಿವಪುರ	107	–	0–18
4	ಹಾದ್ರಿಪುರ	15	2–00	–
5	ಮಲ್ಲೋಹಳ್ಳಿ	196,197	4–00	–
6	ಮಜರಾ ಹೊಸಹಳ್ಳಿ	60/P2	–	1–00
7	ಮಜರಾ ಹೊಸಹಳ್ಳಿ	60/P3	–	1–00
8	ಮಜರಾ ಹೊಸಹಳ್ಳಿ	60/P5	–	1–00
9	ಮಜರಾ ಹೊಸಹಳ್ಳಿ	60/P1	–	1–00
10	ಮೆಣಸಿ	16/P5	3–00	–
11	ಮೆಣಸಿ	16/P6	3–00	–
12	ಮೆಣಸಿ	16/P4	2–33	–
13	ತೂಬಕುಂಟೆ	12/P9	–	2–00
14	ಹೊಸಹುಡ್ಡೆ	26	–	0–22
15	ಕಾಮನ ಅಗ್ರಹಾರ	25/P8	–	1–20
16	ತೂಬುಕುಂಟೆ	12/P8, 13/P6	–	2–20
17	ತೂಬುಕುಂಟೆ	12/P6, 13/P2	–	2–29
18	ಕೋಡಿಹಳ್ಳಿ	65	1–17	–
19	ಬಿಸುವನಹಳ್ಳಿ	64	–	2–00
20	ಬಿಸುವನಹಳ್ಳಿ	68	–	1–00
21	ಕೋಡಿಹಳ್ಳಿ	84/5	4–00	–
22	ಚನ್ನಾಪುರ	78	–	0–28
23	ಚನ್ನಾಪುರ	27	–	2–00
24	ಚನ್ನಾಪುರ	30, 78	–	2–22
25	ಚನ್ನಾಪುರ	27	–	1–25

	ಒಟ್ಟು	2004-05	22-02	23-24
		2005-06		
26	ಗಂಗಾಧರಪುರ	30	1–10	–
27	ಕೋಳೂರು	218	3–00	–
28	ಕತ್ತಿಹೊಸಹಳ್ಳಿ	24/P11	1–21	–
29	ತಿಮ್ಮಸಂದ್ರ	198	1–00	–
30	ಶಿವಪುರ	107	–	1–00
31	ನೆಲಕುಂಟೆ	20	–	2–10
32	ನೆಲಕುಂಟೆ	21	–	1–30
33	ನೆಲಕುಂಟೆ	21	–	2–30
34	ವಡ್ಡರಹಳ್ಳಿ	208	1–16	–
35	ವಡ್ಡರಹಳ್ಳಿ	221	1–23	–
36	ವಡ್ಡರಹಳ್ಳಿ	220	0–27	–
37	ಓಬದೇನಹಳ್ಳಿ	65/P13	0–25	–
38	ಓಬದೇನಹಳ್ಳಿ	65/P16	0–37	–
39	ಕೂಗೋನಹಳ್ಳಿ	66/P17	1–10	–
40	ಕೂಗೋನಹಳ್ಳಿ	66/P15	1–10	–
41	ಮೆಣಸಿ	15	3–00	–
42	ಮೆಣಸಿ	15	3–00	–
43	ಬಸವನಪುರ	30	–	1–20
44	ಮಜರಾ ಹೊಸಹಳ್ಳಿ	77	1–00	–
45	ಕೋಡಿಹಳ್ಳಿ	84/7	3–00	–
46	ಹೊನ್ನಘಟ್ಟ	88	3–20	–
47	ಹೊನ್ನಘಟ್ಟ	87	3–00	–
48	ಕಾಮನ ಅಗ್ರಹಾರ	66/P2	2–00	–
49	ಪುಟ್ಟೇನಹಳ್ಳಿ	75	1–02	–
50	ಕೂಗೋನಹಳ್ಳಿ	145	1–39	–
51	ಹಾದ್ರಿಪುರ	14/P5	1–00	–
52	ಹಾದ್ರಿಪುರ	14/P3	1–00	–
53	ಹಾದ್ರಿಪುರ	14/P2	1–00	–

54	ನೆಲ್ಲುಂಟೆ	20	–	0–38
55	ಗೂಳ್ಯ ನಂದಿಗುಂದ	34	–	1–00
56	ಗೂಳ್ಯ ನಂದಿಗುಂದ	33/P4	–	0–19
57	ಅರಳುಮಲ್ಲಗ	40/P2	–	1–25
58	ಚಿಕ್ಕಬೆಳವಂಗಲ	108	–	1–20
59	ತೂಬುಕುಂಟೆ	135	2–00	–
60	ಹಾದ್ರಿಪುರ	4/P4	1–00	–
61	ಹೊಸಹುಡ್ಡೆ	26	–	0–36
62	ಹೊಸಹುಡ್ಡೆ	26	–	1–32
63	ಹೊಸಹುಡ್ಡೆ	26	–	1–04
64	ಮೆಣಸಿ	15	3–00	–
65	ಗೂಳ್ಯ ನಂದಿಗುಂದ	33/P4	–	0–33
66	ಹೊಸಹುಡ್ಡೆ	26	–	0–28
67	ಕೋಡಿಹಳ್ಳಿ	70/P2	0–28	–
68	ಕೋಡಿಹಳ್ಳಿ	70/P1	1–16	–
69	ಕೋಡಿಹಳ್ಳಿ	70/P4	0–35	–
70	ಕೋಡಿಹಳ್ಳಿ	70/P5	1–05	–
71	ಕೋಡಿಹಳ್ಳಿ	70/P3	1–00	–
72	ಮಲ್ಲೋಹಳ್ಳಿ	186, 188, 198, 199, 200	9–19	–
73	ಗೂಳ್ಯ ನಂದಿಗುಂದ	34/P7	–	0–30
74	ಗೂಳ್ಯ ನಂದಿಗುಂದ	34/P5	–	0–30
75	ಗೂಳ್ಯ ನಂದಿಗುಂದ	34/P8	–	0–30
76	ಚಿಕ್ಕವಡೆಗೆರೆ	47/P5	–	2–00
77	ಶಿವಪುರ	107/P3	–	1–37
78	ರಾಮದೇವನಹಳ್ಳಿ	99/P3	–	3–11
79	ಜೊಕ್ಕನಹಳ್ಳಿ	11/P6	–	2–00
80	ಜೊಕ್ಕನಹಳ್ಳಿ	11/P6	–	1–00
	ಒಟ್ಟು	**2005-06**	**59-13**	**32-23**
		2004-05	**22-02**	**23-24**
		Total	**81-15**	**56-09**

ಹೊಸಕೋಟೆ ತಾಲ್ಲೂಕಿನಲ್ಲಿ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ವರ್ಗ ಹಾಗೂ ಇತರೆ ವರ್ಗದವರ ಜಮೀನುಗಳನ್ನು ಮಾರಾಟ ಮಾಡಲು ಸರ್ಕಾರದಿಂದ ಅನುಮತಿ ನೀಡಿರುವ ವಿವರ

ಕ್ರ. ಸಂ.	ಗ್ರಾಮದ ಹೆಸರು	ಸರ್ವೆ ನಂ.	ವಿಸ್ತೀರ್ಣ ಎಕರೆ ಎಸ್.ಸಿ / ಎಸ್.ಟಿ	ಇತರರು	ಷರಾ
		2004-05			
1	ಜಡಿಗೇನಹಳ್ಳಿ	185/P13	1-20	–	–
2	ಜಡಿಗೇನಹಳ್ಳಿ	185/P27	2-0	–	–
3	ಚಿಕ್ಕತತ್ತಮಂಗಲ	33/3	2-02	–	–
4	ಹಂದೇನಹಳ್ಳಿ	45/P10	–	1-35	–
5	ಕಲ್ಕುಂಟೆ ಅಗ್ರಹಾರ	44/P48	1-00	–	–
6	ಸಮೇತನಹಳ್ಳಿ	36	–	3-00	–
7	ಸಮೇತನಹಳ್ಳಿ	36/P8	–	1-00	–
8	ಹಂದೇನಹಳ್ಳಿ	68/P11	–	2-15	–
9	ಓರೋಹಳ್ಳಿ	50	–	1-32	–
	ಒಟ್ಟು		**6-22**	**10.02**	
		2005-06			
10	ಜಡಿಗೇನಹಳ್ಳಿ	185/P26	1-20	–	–
11	ಜಡಿಗೇನಹಳ್ಳಿ	185/P33	1-00	–	–
12	ತಿಂಡ್ಲು	69	2-00	–	–
13	ವಾಗಟ	107	2-20	–	–
14	ಚಿಕ್ಕಹುಲ್ಲೂರು	25	–	4-00	–
15	ಗಣಗಲೂರು	57/P14	2-00	–	–
16	ಯಳಚಹಳ್ಳಿ	70	–	0-30	–
17	ಯಳಚಹಳ್ಳಿ	70/P25	–	2-00	–
18	ಯಳಚಹಳ್ಳಿ	70/P23	–	0-18	–
19	ಯಳಚಹಳ್ಳಿ	70/P29	–	0-20	–
20	ಯಳಚಹಳ್ಳಿ	70/P24	–	1-18	–
21	ಓರೋಹಳ್ಳಿ	50/P19	2-00	–	–

22	ಗಂಗಾಪುರ	3/P16	–	1–27	–
23	ಕೊಳತೂರು	117	2–00	–	–
24	ಬೆಳ್ಳಿಕೆರೆ	100/P1	1–00	–	–
25	ಬೆಳ್ಳಿಕೆರೆ	99/5	2–00	–	–
26	ಬೆಳ್ಳಿಕೆರೆ	99/3	2–00	–	–
27	ಬೆಳ್ಳಿಕೆರೆ	100/5	1–00	–	–
28	ಬೆಳ್ಳಿಕೆರೆ	99/1	1–00	–	–
29	ಬೆಳ್ಳಿಕೆರೆ	99/2	2–00	–	–
	ಒಟ್ಟು		**22–00**	**10–33**	

ಫೋಷ್ಪಾರೆ

ಕ್ರ. ಸಂ.	ಸಾಲು	ವರ್ಗ		ಒಟ್ಟು
		ಎಸ್.ಸಿ/ ಎಸ್.ಟಿ ಎಃಗು	ಇತರರು ಎಃಗು	ಎಃಗು
1	**2**	**3**	**4**	**5**
1	2004–05	6–22	10–02	16–24
2	2005–06	22–00	10–33	32–33
	ಒಟ್ಟು	**28–22**	**20–35**	**49–17**

ದೇವನಹಳ್ಳಿ ತಾಲ್ಲೂಕಿನಲ್ಲಿ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ವರ್ಗ ಹಾಗೂ ಇತರೆ ವರ್ಗದವರ ಜಮೀನುಗಳನ್ನು ಮಾರಾಟ ಮಾಡಲು ಸರ್ಕಾರದಿಂದ ಅನುಮತಿ ನೀಡಿರುವ ಏವರ

ಕ್ರ. ಸಂ.	ಗ್ರಾಮದ ಹೆಸರು	ಸರ್ವೆ ನಂ.	ವಿಸ್ತೀರ್ಣ ಎಃಗು		ಷರಾ
			ಎಸ್.ಸಿ / ಎಸ್.ಟಿ	ಇತರರು	
		2004–05			
1	ದೇವನಹಳ್ಳಿ	134	0–20	–	
2	ದೇವನಹಳ್ಳಿ	134	0–30	–	
3	ಚಿಕ್ಕತತ್ತಮಂಗಲ	33/3	2–02	–	
4	ಚಿಕ್ಕತತ್ತಲಮಂಗಲ	33/2	2–08	–	
5	ನಲ್ಲೂರು	39/16	–	3–00	
6	ಇಂದ್ರಸನಹಳ್ಳಿ	7	1–00	–	
7	ಮಾರಗೊಂಡನಹಳ್ಳಿ	21/P1	–	0–30	

8	ಯರ್ತಿಗಾನಹಳ್ಳಿ	55/P/20	2–10	–
9	ಮೂಡಿಗಾನಹಳ್ಳಿ	8	1–00	–
10	ಇಂಡ್ರಸನಹಳ್ಳಿ	7	2–00	–
11	ಇಲ್‌ತೊರೆ	86/22	2–00	–
12	ಯಂಬ್ರಹಳ್ಳಿ	95/P/4	–	0–19
13	ಯಂಬ್ರಹಳ್ಳಿ	95/4B	–	0–23
14	ವಿಶ್ವನಾಥಪುರ	178/4	–	1–00
15	ಪಾಳ್ಯ	36	–	4–01
16	ಬಿದಲೂರು	132	2–00	–
17	ಟಿ. ಹೊಸಹಳ್ಳಿ	90	–	1–00
18	ಟಿ. ಹೊಸಹಳ್ಳಿ	89	–	2–00
19	ದೊಡ್ಡಬೀಮನಹಳ್ಳಿ	86	–	–
20	ಎಸ್. ತೆಲ್ಲೋಹಳ್ಳಿ	54	2–02	–
21	ಎಸ್. ತೆಲ್ಲೋಹಳ್ಳಿ	45	1–39	–
22	ಎಸ್. ತೆಲ್ಲೋಹಳ್ಳಿ	47	1–39	–
23	ಎಸ್. ತೆಲ್ಲೋಹಳ್ಳಿ	55	1–00	–
24	ನಾಗಮಂಗಲ	53	–	2–00
25	ಗಡುವನಹಳ್ಳಿ	84	2–00	–
26	ದೇವನಹಳ್ಳಿ	393/P5	2–00	–
27	ನೀಲೇರಿ	24/PB	1–00	–
28	ಟಿ. ಅಗ್ರಹಾರ	55/P8	1–20	–
29	ಟಿ. ಅಗ್ರಹಾರ	55/P6	1–00	–
30	ಕೆಂಪಲಿಂಗನಪುರ	7/P5	1–20	–
31	ಬೂದಿಹಾಳ್	10/P13	1–00	–
32	ಎಸ್. ತೆಲ್ಲೋಹಳ್ಳಿ	46	1–39	–
33	ಬೂದಿಹಾಳ್	10/P14	1–00	–
34	ಉಗನವಾಡಿ	87/26	–	0–33
35	ಚನ್ನಹಳ್ಳಿ	64	2–00	–
36	ಮಾರಗೊಂಡನಹಳ್ಳಿ	21/9	–	1–20
37	ಮಾರಗೊಂಡನಹಳ್ಳಿ	21/2	–	1–20

38	ಎಸ್. ತೆಲ್ಲೋಹಳ್ಳಿ	53	2–02	–
39	ದೇವಗಾನಹಳ್ಳಿ	30/2	2–00	–
40	ಗೋಪಸಂದ್ರ	40/P9	1–20	–
41	ಬಿನ್ನಮಂಗಲ	55	3–00	–
42	ನಾಗನಾಯಕನಹಳ್ಳಿ	52/P35	–	0–20
43	ಜೊನ್ನಹಳ್ಳಿ	143	–	4–00
44	ಬೈಡಗುಪ್ಪೆ	76	–	1–00
45	ಬೈಚಾಪುರ	83	1–00	–
46	ಚೈಚಾಪುರ	73	1–28	–
47	ಉಗನವಾಡಿ	87/P/29	–	1–00
48	ದೊಡ್ಡತತ್ತಮಂಗಲ	157/2	–	1–10
49	ದೊಡ್ಡತತ್ತಮಂಗಲ	157/P/26	–	2–15
	ಒಟ್ಟು		**48–19**	**26–31**

ದೇವನಹಳ್ಳಿ ತಾಲ್ಲೂಕು
2005–06ನೇ ಸಾಲು

1	ಬೈಚಾಪುರ	75	1–35	
2	ಪೂಜನಹಳ್ಳಿ	70	1–00	
3	ಸಿಂಗ್ರಹಳ್ಳಿ	60:p:18	2–00	
4	ಸಿಂಗ್ರಹಳ್ಳಿ	60:p:8	2–00	
5	ಸಿಂಗ್ರಹಳ್ಳಿ	60:p:3	2–00	
6	ಸಿಂಗ್ರಹಳ್ಳಿ	60:p:4	2–00	
7	ಮಾರಗೊಂಡನಹಳ್ಳಿ	21/9	1–20	
8	ಬೆಟ್ಟೇನಹಳ್ಳಿ	73:p:2	2–13	
9	ಬೆಟ್ಟೇನಹಳ್ಳಿ	108:B:3		1–10
10	ಬೆಟ್ಟೇನಹಳ್ಳಿ	108:B:1		1–14
11	ವಿಜಯಪುರ	159/22	2–00	
12	ಬೆಟ್ಟೇನಹಳ್ಳಿ	108/2		0–13
13	ಬೆಟ್ಟೇನಹಳ್ಳಿ	73p3		0–33
14	ಬೆಟ್ಟೇನಹಳ್ಳಿ	108/1		2–10

15	ಸಿಂಗ್ರಹಳ್ಳಿ	60:P:14	2–00	
16	ಸಿಂಗ್ರಹಳ್ಳಿ	60:P:21	2–00	
17	ಚನ್ನಹಳ್ಳಿ	64	2–00	
18	ಲಿಂಗಧೀರಗೊಲ್ಲಹಳ್ಳಿ	78	3–38	
19	ಪಾಳ್ಯ	3/16	1–39	
20	ಬೈಚಾಪುರ	81	0–38	
21	ನಲ್ಲೂರು	139P15	3–00	
22	ಚನ್ನಹಳ್ಳಿ	64P35	1–00	
23	ಪಾಳ್ಯ	3/18	2–00	
24	ತಿಂಡ್ಲು	7P14	2–00	
25	ಕಾಮೇನಹಳ್ಳಿ	31P5	1–20	
26	ಕಾಮೇನಹಳ್ಳಿ	31P4	1–00	
27	ಬಿನ್ನಮಂಗಲ	55B		0–13
28	ಚಿಕ್ಕತತ್ತಮಂಗಲ	33/4	1–18	
29	ಇಲ್‌ತೊರೆ	46(New 138)		1–00
30	ಬಿನ್ನಮಂಗಲ	55/B		0–16
31	ಚನ್ನಹಳ್ಳಿ	64P24	1–00	
32	ಬೈಚಾಪುರ	88	1–37	
33	ಕೆಂಪತಿಮ್ಮನಹಳ್ಳಿ	9	2–00	
34	ಯಂಬ್ರಹಳ್ಳಿ	1141:1:B	2–00	
35	ಕೆಂಪತಿಮ್ಮನಹಳ್ಳಿ	9P2	2–00	
36	ಸೌತೆಗೌಡನಹಳ್ಳಿ	9	2–17	
37	ಸೌತೆಗೌಡನಹಳ್ಳಿ	18B8	2–00	
38	ಜೊನ್ನಹಳ್ಳಿ	63B41		1–15
39	ಸೋಮತ್ತನಹಳ್ಳಿ	235	2–22	
40	ಸೋಮತ್ತನಹಳ್ಳಿ	237	2–21	
41	ಸೋಮತ್ತನಹಳ್ಳಿ	236	2–22	
42	ದೇವನಹಳ್ಳಿ	393P4	3–00	
43	ಮಾರಗೊಂಡನಹಳ್ಳಿ	21/7		1–00

44	ವಿಶ್ವನಾಥಪುರ	184P54	2–00	
45	ಕುಂದಾಣ	138P16	1–00	
46	ಕುಂದಾಣ	138P12	0–25	
47	ಕುಂದಾಣ	46	1–20	
48	ಕುಂದಾಣ	138P34	0–20	
49	ಕಾಮೇನಹಳ್ಳಿ	31P15		2–28
50	ಕಾಮೇನಹಳ್ಳಿ	31P17		4–00
51	ಕಾಮೇನಹಳ್ಳಿ	31P17/2		3–30
52	ಕಾಮೇನಹಳ್ಳಿ	31P6		4–28
53	ಕನ್ನಮಂಗಲ	131		0–10
54	ಮುದ್ದನಾಯಕನಹಳ್ಳಿ	112P4	1–30	
55	ಅರಳೂರು	66/1	3–36	
56	ಕೋರಮಂಗಲ	100P29		1–29
57	ಬಿದಲೂರು	167P13		2–10
58	ಚನ್ನಹಳ್ಳಿ	64P40	1–00	
59	ಜೊನ್ನಹಳ್ಳಿ	63P34	1–20	
60	ಜೊನ್ನಹಳ್ಳಿ	63P31	0–12	
61	ಬೂದಿಗೆರೆ	214P10		2–00
62	ಹುರಳಗುರ್ಕಿ	105P1		1–25
63	ಹುರಳಗುರ್ಕಿ	100P7		1–20
64	ಹುರಳಗುರ್ಕಿ	100P1		1–09
65	ಹುರಳಗುರ್ಕಿ	100P9		0–30
66	ಹುರಳಗುರ್ಕಿ	105P2		3–20
67	ಹುರಳಗುರ್ಕಿ	98P9		0–18
68	ಹುರಳಗುರ್ಕಿ	100P4		0–30
69	ಹುರಳಗುರ್ಕಿ	98P6		0–21
70	ಹುರಳಗುರ್ಕಿ	99P2		0–15
71	ಹುರಳಗುರ್ಕಿ	100P2		0–13
72	ಹುರಳಗುರ್ಕಿ	100P4		0–38
73	ಹುರಳಗುರ್ಕಿ	99P9		0–28

74	ಹುರಳಗುರ್ಕಿ	99/9		0–13
75	ಹುರಳಗುರ್ಕಿ	100P8		1–00
76	ಹುರಳಗುರ್ಕಿ	99P13		0–16
77	ಹುರಳಗುರ್ಕಿ	99/9/1		0–30
78	ಹುರಳಗುರ್ಕಿ	99/8		0–38
79	ರಾಯಸಂದ್ರ	44	4–12	
80	ಇಂಡ್ರಸನಹಳ್ಳಿ	110	1–13	
81	ಮುದ್ದನಾಯಕನಹಳ್ಳಿ	112P7	1–20	
82	ಆಲೂರುದುದ್ದನಹಳ್ಳಿ	90/3/P2		2–02
83	ಹುರಳಗುರ್ಕಿ	105P4		0–30
84	ಮಲ್ಲೇಪುರ	47/7		2–25
85	ಮಲ್ಲೇಪುರ	47/8		0–15
	ಮಲ್ಲೇಪುರ	47/5		
86	ಮಲ್ಲೇಪುರ	47/5		2–03
	ಮಲ್ಲೇಪುರ	47/9		2–29
87	ಮಲ್ಲೇಪುರ	47/10		0–31
		50P6		
88	ಮಲ್ಲೇಪುರ	47/1		3–20
		47/3		
89	ಬಿದಲೂರು	167/2		3–37
90	ಬೆಟ್ಟೇನಹಳ್ಳಿ	162P46		3–00
91	ಇಲ್ತೊರೆ	139		0–25
92	ಸಿಂಗ್ರಹಳ್ಳಿ	60P27		1–22
93	ಮುದುಗುರ್ಕಿ	20P6		1–18
94	ದೊಡ್ಡಸಾಗರಹಳ್ಳಿ	29/11		1–11
95	ದೊಡ್ಡಸಾಗರಹಳ್ಳಿ	29P21		0–17
96	ದೊಡ್ಡಸಾಗರಹಳ್ಳಿ	29/P9		0–18
97	ದೊಡ್ಡಸಾಗರಹಳ್ಳಿ	29P10		0–08
98	ದೊಡ್ಡಸಾಗರಹಳ್ಳಿ	30P5		0–25
99	ದೊಡ್ಡಸಾಗರಹಳ್ಳಿ	22P9		3–09

100	ದೊಡ್ಡಸಾಗರಹಳ್ಳಿ	29P11		0–35
101	ದೊಡ್ಡಸಾಗರಹಳ್ಳಿ	22		1–20
102	ದೊಡ್ಡಸಾಗರಹಳ್ಳಿ	29B6		0–17
103	ದೊಡ್ಡಸಾಗರಹಳ್ಳಿ	31B5		1–00
104	ದೊಡ್ಡಸಾಗರಹಳ್ಳಿ	29P25		0–07
105	ದೊಡ್ಡಸಾಗರಹಳ್ಳಿ	29/21		0–17
106	ದೊಡ್ಡಸಾಗರಹಳ್ಳಿ	29P10		0–08
107	ಬೆಟ್ಟೇನಹಳ್ಳಿ	97/1		3–14
108	ಬೆಟ್ಟೇನಹಳ್ಳಿ	74P1		0–36
109	ಹುರಳಗುರ್ಕಿ	98P8		0–24
110	ಬೂದಿಗೆರೆ	215P13		2–24
111	ತಿಂಡ್ಲು	7B5		1–20
112	ಬೂದಿಗೆರೆ	202P10		2–00
			86–28	**95–00**

ನೆಲಮಂಗಲ ತಾಲ್ಲೂಕಿನಲ್ಲಿ ಪರಿಶಿಷ್ಟ ಜಾತಿ / ಪರಿಶಿಷ್ಟ ವರ್ಗ ಹಾಗೂ ಇತರೆ ವರ್ಗದವರ ಜಮೀನುಗಳನ್ನು ಮಾರಾಟ ಮಾಡಲು ಸರ್ಕಾರದಿಂದ ಮಂಜೂರಾತಿ ಮಾಡಿರುವ ವಿವರ

2004–05ನೇ ಸಾಲಿನಲ್ಲಿ ಯಾವುದೇ ಅನುಮತಿ ನೀಡಿರುವುದಿಲ್ಲ

2005–06ನೇ ಸಾಲಿನಲ್ಲಿ ಅನುಮತಿ ನೀಡಿರುವ ವಿವರ

ಕ್ರ. ಸಂ.	ಗ್ರಾಮದ ಹೆಸರು	ಸರ್ವೆ ನಂ.	ವಿಸ್ತೀರ್ಣ ಎ.ಗು ಎಸ್.ಸಿ. / ಎಸ್.ಟಿ.	ಇತರೆ	ಷರಾ
1	ಶ್ರೀನಿವಾಸಪುರ	153	2–00	–	
2	ಶ್ರೀನಿವಾಸಪುರ	253,256	0–37,0–39	–	
3	ಶ್ರೀನಿವಾಸಪುರ	153	2–00	–	
4	ಶ್ರೀನಿವಾಸಪುರ	153	2–00	–	
5	ಶ್ರೀನಿವಾಸಪುರ	9P5	2–00	–	
6	ಹನುಮಂತಪುರ	18P6	1–20	–	
7	ಮಂಟನಕುರ್ಕಿ	212	2–00	–	
8	ತೊಣಚನಕುಪ್ಪೆ	52	2–00	–	

9	ಅರಿಶಿನಕುಂಟೆ	19	1–28	–
10	ಬೈರಶೆಟ್ಟಿಹಳ್ಳಿ	170	1–20	–
11	ತೊಣಚೆನಕುಪ್ಪೆ	87	0–39	–
12	ತೊಣಚನಕುಪ್ಪೆ	89	0–38	–
13	ಅರಿಶಿನಕುಂಟೆ	33:P:25	–	0–13
14	ಅರಿಶಿನಕುಂಟೆ	33:P:28	–	1–28
15	ದೊಡ್ಡಬೆಲೆ	108:P:30	1–06	–
16	ಟಿ. ಬೇಗೂರು	256:P:17	–	2–09
17	ಟಿ. ಬೇಗೂರು	256:P:16	–	2–09
18	ಕಾಡುಕರೇನಹಳ್ಳಿ	9:P:6	1–05	–
19	ಕಾಡುಕರೇನಹಳ್ಳಿ	9	1–05	–
20	ಹನುಮಂತಪುರ	18:P:16	–	0–12
21	ಜಕ್ಕಸಂದ್ರ	136:P:9	–	1–00
22	ಅರಿಶಿನಕುಂಟೆ	104:P:2	–	1–12
	ಒಟ್ಟು		**23–37**	**9–03**

ಶ್ರೀ ಜೆ. ನರಸಿಂಹಸ್ವಾಮಿ : ಮಾನ್ಯ ಅಧ್ಯಕ್ಷರೆ, ಉತ್ತರ ಒದಗಿಸಿದ್ದಾರೆ. ಅವರು ಕೊಟ್ಟಿರುವಂತಹ ಉತ್ತರದಲ್ಲಿ ಅಲ್ಲಿ ಏನು ನಡೆದಿದೆಯೋ ಅದಕ್ಕೂ ಉತ್ತರಕ್ಕೂ ಹೊಂದಾಣಿಕೆ ಇಲ್ಲ. ಉದಾಹರಣೆಗೆ ನಮ್ಮ ತಾಲ್ಲೂಕಿನಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರ ಜಮೀನನ್ನು ಎಷ್ಟು ಪರವಾನಿಗೆ ಕೊಟ್ಟಿದ್ದಾರೆ ಎಂದರೆ ಕೇವಲ 59 ಎಕರೆ ಎಂದು ಹೇಳಿದ್ದಾರೆ. ಆದರೆ ಇದನ್ನು ಮಾನ್ಯ ಅಧಿಕಾರಿಗಳು ತಪ್ಪು ಮಾಹಿತಿ ಕೊಟ್ಟಿರಬಹುದು ಎಂಬುದು ನನ್ನ ಭಾವನೆ. ನನ್ನ ತಾಲ್ಲೂಕಿನಲ್ಲಿ ಒಂದೇ ಒಂದು ಹಳ್ಳಿ ಬಗ್ಗೆ ನಾನು ಹೇಳುತ್ತೇನೆ, ಚೊಕ್ಕನಹಳ್ಳಿ ಎನ್ನುವ ಒಂದು ಗ್ರಾಮ ಇದೆ, ಒಂದು ಸರ್ವೆ ನಂಬರ್ 11 ಅದರಲ್ಲಿ ನೂರಾರು ಎಕರೆ ಇದೆ. ಅದರಲ್ಲಿ ಬಹಳಷ್ಟು ಎಕರೆಗೆ ಅನುಮತಿ ಕೊಟ್ಟಿದ್ದಾರೆ. ಇಲ್ಲಿ ಎರಡು ಎಕರೆಗೆ ಅನುಮತಿಯನ್ನು ಒಂದು ಸರ್ವೆ ನಂಬರ್‌ನಲ್ಲಿ ಕೊಟ್ಟು, 50 ಎಕರೆ ಅದರಲ್ಲಿ ಮಾರಾಟವಾಗಿರುವಂತಹ ಉದಾಹರಣೆಗಳು ಇವೆ. ಮಾನ್ಯ ಕಂದಾಯ ಸಚಿವರು ನಮ್ಮ ತಾಲ್ಲೂಕಿನಲ್ಲಿ ನಡೆದಿರುವಂತಹ ಹಗರಣವನ್ನು ಪರಿಶೀಲನೆ ಮಾಡಿಸಬೇಕು. ಎನ್‌ಕ್ವೈರಿ ಮಾಡಿಸಬೇಕು. ಇದೇ ರೀತಿ ಮುಂದುವರೆದರೆ ಸರ್ಕಾರ ಏನು 97 ರಿಂದ ಇದುವರೆಗೂ ಬಗರ್ ಹುಕುಂ ನಲ್ಲಿ ಸ್ಯಾಂಕ್ಷನ್ ಮಾಡಿರುವಂತಹ ಪರಿಶಿಷ್ಟ ಜಾತಿ ಮತ್ತು ಪಂಗಡದವರಿಗೆ ಜಮೀನು ಇಲ್ಲದ ಹಾಗೆ ಆಗುತ್ತದೆ. ಇನ್ನು ಎರಡನೆಯದಾಗಿ ಇವತ್ತು ಅಧಿಕಾರಿಗಳು ಆಗಲೆ ನಾನು ಹೇಳಿದ ಹಾಗೆ ತಪ್ಪು ಮಾಹಿತಿಯನ್ನು ಕೊಡುತ್ತಾರೆ. ಗಾದೆ ಹೇಳುವಂತೆ ಎತ್ತು ಈಯ್ತು ಎಂದರೆ ಕೊಟ್ಟಿಗೆಯಲ್ಲಿ

ಕಟ್ಟು ಅಂದಹಾಗೆ, ಒಂದು ಕಡೆ ಸರ್ಕಾರದ ಧೋರಣೆ ಕೆರೆಗಳನ್ನು ಅಭಿವೃದ್ಧಿ ಮಾಡಬೇಕೆಂದು ಹೇಳುವುದು. ನಮ್ಮ ತಾಲ್ಲೂಕಿನಲ್ಲಿ 5 ಕೋಟಿ ರೂಪಾಯಿ ವೆಚ್ಚದಲ್ಲಿ ಮೈನರ್ ಇರಿಗೇಷನ್ ಕೆರೆಯ ಅಭಿವೃದ್ಧಿ ನಡೆಯುತ್ತಿದೆ. ಒಂದು ಕಡೆ ಸರ್ಕಾರದವರೇ 30 ಎಕರೆ ಜಮೀನನ್ನು ಪರಭಾರೆ ಮಾಡುವುದಕ್ಕೆ ಹೊರಟಿದ್ದಾರೆ. ಎರಡು ಎಕರೆ ಗುಂಡು ತೋಪು, ಕೆರೆ ಮತ್ತು ಸ್ಮಶಾನ ಇವುಗಳು ಯಾವತ್ತೂ ಪರಭಾರೆ ಆಗಬಾರದು. ಈ ರೀತಿ ಯಾವುದೇ ಸರ್ಕಾರದಲ್ಲಿ ಆಗಿರಲಿಲ್ಲ. ಈ ಸರ್ಕಾರದಲ್ಲಿ ಇವತ್ತು ಆಗಿದೆ. ನಮ್ಮ ತಾಲ್ಲೂಕಿನಲ್ಲಿ ನಡೆದಂತಹ ಒಂದು ಘಟನೆ ಮೊನ್ನೆ ಪಂಚಾಯತ್‌ನವರು ರೆಸಲ್ಯೂಷನ್ ಮಾಡಿ ಅನುಮೋದನೆ ಮಾಡಿ ಕಳುಹಿಸಿದ್ದಾರೆ. ಅದಕ್ಕೆ ಜಿಲ್ಲಾಪಂಚಾಯತ್ ಅನುಮೋದನೆ ಕೊಟ್ಟಿದ್ದಾರೆ. ಅದು ಮಾನ್ಯ ಕಂದಾಯ ಸಚಿವರ ಗಮನಕ್ಕೆ ಬಂದಿದೆಯೋ ಇಲ್ಲವೋ ಗೊತ್ತಿಲ್ಲ. ಮಾನ್ಯ ಉಸ್ತುವಾರಿ ಸಚಿವರು ಏನು ಮಾಡುತ್ತಾರೆಂಬುದು ಗೊತ್ತಿಲ್ಲ. ಅದು ಅವರ ಗಮನಕ್ಕೂ ಬಂದಿರಬಹುದು. ತಾವು ದಯವಿಟ್ಟು ಇದರ ಬಗ್ಗೆ ಗಮನಕ್ಕೆ ತೆಗೆದುಕೊಳ್ಳಬೇಕೆಂದು ಮಾನ್ಯ ಅಧ್ಯಕ್ಷರ ಮೂಲಕ ಕಂದಾಯ ಸಚಿವರನ್ನು ಮನವಿ ಮಾಡಿಕೊಳ್ಳುತ್ತೇನೆ.

ಶ್ರೀ ಜಗದೀಶ್ ಶೆಟ್ಟರ್ : ಸನ್ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರಾದ ನರಸಿಂಹಸ್ವಾಮಿಯವರು ಬೆಂಗಳೂರು ಗ್ರಾಮಾಂತರ ಜಿಲ್ಲೆಯ ದೊಡ್ಡ ಬಳ್ಳಾಪುರದ ಉಪ ವಿಭಾಗದ ಬಗ್ಗೆ ಈ ಪ್ರಶ್ನೆಯನ್ನು ಕೇಳಿದ್ದಾರೆ. 2004–05 ಮತ್ತು 2005–06 ರಲ್ಲಿ ಎಷ್ಟು ಕಾಗದಗಳು ನೋಂದಣಿಯಾಗಿದೆ. ಆ ಸಂಖ್ಯೆಯನ್ನು ಕೊಟ್ಟಿದ್ದೇನೆ. ಅದರ ಬಗ್ಗೆ ಅವರು ಯಾವುದೇ ಒಂದು ಸ್ಪಷ್ಟೀಕರಣವನ್ನು ಕೇಳಿಲ್ಲ. ಇನ್ನು ಎರಡನೆಯದಾಗಿ ಅವರು ತಮ್ಮ ತಾಲ್ಲೂಕಿನಲ್ಲಿ ದೊಡ್ಡ ಬಳ್ಳಾಪುರದಲ್ಲಿ ಇವತ್ತು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರು ತಮ್ಮ ಜಮೀನುಗಳನ್ನು ಮಾರಾಟ ಮಾಡುವುದಕ್ಕೆ ಅನುಮತಿ ಕೇಳಿದ್ದು, ಅದಕ್ಕೆ ಪರ್ಮಿಷನ್ ಕೊಟ್ಟಿದ್ದು ಎಷ್ಟು ಎನ್ನುವುದನ್ನು ಹೇಳುವುದಾದರೆ 2004–05 ರಲ್ಲಿ ದೊಡ್ಡ ಬಳ್ಳಾಪುರ ತಾಲ್ಲೂಕಿನಲ್ಲಿ 22 ಎಕರೆ 2 ಗುಂಟೆ ಮಾರಾಟ ಮಾಡುವುದಕ್ಕೆ ಅನುಮತಿ ಕೊಟ್ಟಿದ್ದು. ಮತ್ತು ಇನ್ನೊಂದು 23 ಎಕರೆ ಪರ್ಮಿಷನ್ ಕೊಟ್ಟಿದು. 2005–06 ರಲ್ಲಿ 59 ಎಕರೆ ಪರ್ಮಿಷನ್ ಕೊಟ್ಟಿದ್ದು ಇದರ ಬಗ್ಗೆ ಅಂಕಿಸಂಖ್ಯೆಯನ್ನು ಕೊಟ್ಟಿದ್ದೇನೆ. ಈ ಅಂಕಿಸಂಖ್ಯೆ ಸರಿಯಲ್ಲವೆನ್ನುವುದು ಮಾನ್ಯ ನರಸಿಂಹ ಸ್ವಾಮಿಯವರು ಈ ಸದನದ ಮುಂದೆ ತೆಗೆದುಕೊಂಡು ಬಂದಿದ್ದಾರೆ. ಇನ್ನೊಂದು ಬಹಳ ಮುಖ್ಯವಾಗಿ ಅವರು ಹೇಳಿದ್ದು, ಕೇವಲ 2 ಎಕರೆಗೆ ಮಾತ್ರ ಪರ್ಮಿಷನ್ ತೆಗೆದುಕೊಂಡು 50 ಎಕರೆಯಷ್ಟು ಜಮೀನನ್ನು ಮಾರಾಟ ಮಾಡಲಾಗಿದೆ ಎಂದು ಅವರು ಹೇಳಿದ್ದಾರೆ. ಇದರ ಬಗ್ಗೆ ಸ್ಪಷ್ಟವಾಗಿ ಮಾಹಿತಿಗಳನ್ನು ಕೊಟ್ಟರೆ ಯಾವ ಸರ್ವೇ ನಂಬರ್‌ನಲ್ಲಿ ಈ ರೀತಿಯಾಗಿದೆ ಎಂದು ಅದರ ಬಗ್ಗೆ ಎನ್‌ಕ್ವೈರಿ ಮಾಡಿಸುತ್ತೇನೆ. ಅದರಲ್ಲಿ ಯಾರಾದರೂ ಅಧಿಕಾರಿಗಳು ಶಾಮೀಲು ಆಗಿದ್ದರೆ, ಯಾರಾದರೂ ಆ ನೋಂದಣಿ ಇಲಾಖೆಯಲ್ಲಿ ಶಾಮೀಲು ಆಗಿದ್ದರೆ, ಈ ರೀತಿಯಾಗಿ ಎರಡು ಎಕರೆ ಜಮೀನನ್ನು ಮಾತ್ರ ಮಾರಾಟ ಮಾಡಲು ಪರ್ಮಿಷನ್ ಅನ್ನು ತೆಗೆದುಕೊಂಡು, 50 ಎಕರೆ ಜಮೀನನ್ನು ಮಾರಾಟ ಮಾಡಿರುವಂತಹ ಘಟನೆಗಳು ಏನಾದರೂ ಆಗಿದ್ದರೆ, ಅದು ಅಪರಾಧವಾಗುತ್ತದೆ. ಆದುದರಿಂದ ಈ ಬಗ್ಗೆ ನಾನು

ನಿರ್ಧಾಕ್ಷಿಣ್ಯವಾದಂಥ ಕ್ರಮವನ್ನು ತೆಗೆದುಕೊಳ್ಳುತ್ತೇನೆ. ಅದರ ಬಗ್ಗೆ ಸ್ಪಷ್ಟವಾದಂತಹ ಸರ್ವೆ ನಂಬರ್ ಮತ್ತು ಎಷ್ಟು ಜಮೀನು ಇದೆಯೆಂಬ ಬಗ್ಗೆ ಸ್ಪಷ್ಟವಾದಂತಹ ಮಾಹಿತಿಯನ್ನು ಒದಗಿಸಿದರೆ, ನಾನು ಅದರ ಬಗ್ಗೆ ಎನ್‌ಕ್ವೈರಿಯನ್ನು ನಡೆಸುತ್ತೇನೆ ಮತ್ತೆ ನಿರ್ಧಾಕ್ಷಿಣ್ಯವಾಗಿ ಕ್ರಮವನ್ನು ತೆಗೆದುಕೊಳ್ಳುತ್ತೇನೆ.

ಅಧ್ಯಕ್ಷರು : ಮಾನ್ಯ ಗುರುಪಾದಪ್ಪ ನಾಗಮಾರಪಲ್ಲಿಯವರ ಪ್ರಶ್ನೆಗೆ ಸರ್ಕಾರದವರು 15 ದಿವಸಗಳ ಕಾಲಾವಕಾಶವನ್ನು ಕೇಳಿದ್ದಾರೆ.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ : ಮಾನ್ಯ ಅಧ್ಯಕ್ಷರೆ, ನನ್ನ ಪ್ರಶ್ನೆಗೆ ಉತ್ತರವನ್ನು ಈ ಅಧಿವೇಶನ ಮುಗಿಯುವುದರೊಳಗಾಗಿ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಈ ಅಸೆಂಬ್ಲಿ ಮುಗಿದ ಮೇಲೆ ಕೊಡುವುದಾದರೆ ಬೇಡ.

ಅಧ್ಯಕ್ಷರು : ಕೊಡಿಸುತ್ತೇನೆ.

ಶ್ರೀ ಎಂ.ಟಿ.ಬಿ. ನಾಗರಾಜ್ : ಮಾನ್ಯ ಅಧ್ಯಕ್ಷರೆ, ನಮ್ಮ ಹೊಸಕೋಟೆ ತಾಲ್ಲೂಕಿನಲ್ಲೂ ಕೂಡ 98 ಎಕರೆ ಭೂಮಿಯ ಬಗ್ಗೆಯೂ ಈ ರೀತಿಯೇ ಆಗಿದೆ.

(ಅಡಚಣೆ)

ಅಧ್ಯಕ್ಷರು : ಈ ಪ್ರಶ್ನೆಯೂ ಮುಗಿದಿದೆ, ತಾವು ದಯಮಾಡಿ ಕುಳಿತುಕೊಳ್ಳಿ. ಈಗ ಶ್ರೀ ಐವಾನ್ ನಿಗ್ಲಿಯವರೆ, ಪ್ರಶ್ನೆಯನ್ನು ಕೇಳಿ. ಈ ರೀತಿಯಾಗಿ ಮಾಡಿದರೆ ಆಗುವುದಿಲ್ಲ. ಈ ಪ್ರಶ್ನೆಯನ್ನು ಶ್ರೀ ನರಸಿಂಹಸ್ವಾಮಿಯವರು ಕೇಳಿದರು. ಅವರು ಉಪ ಪ್ರಶ್ನೆಯನ್ನು ಕೇಳಬೇಕಾಗಿತ್ತು, ಇದು ಇಲ್ಲವೆಂದರೆ ಮುಂದಿನ ಪ್ರಶ್ನೆಗೆ ಹೋಗಬೇಕಾಗುತ್ತದೆ.

(ಅಡಚಣೆ)

ಅಧ್ಯಕ್ಷರು : ನಾನು ಮುಂದಿನ ಪ್ರಶ್ನೆಯನ್ನು ಕರೆದ ಮೇಲೆ ಈ ರೀತಿಯಾಗಿ ನಿಂತುಕೊಂಡರೆ ಹೇಗೆ?

ಶ್ರೀ ಎಂ.ಟಿ.ಬಿ. ನಾಗರಾಜು : ಮಾನ್ಯ ಅಧ್ಯಕ್ಷರೆ, ಈ ಪ್ರಶ್ನೆಗೆ ಸಂಬಂಧಪಟ್ಟಂತೆ ಗಂಭೀರವಾಗಿ ಅಧಿಕಾರಿಗಳಿಂದ ಉತ್ತರವನ್ನು ಮಾನ್ಯ ಮಂತ್ರಿಯವರು ತೆಗೆದುಕೊಳ್ಳಬೇಕು.

ಶ್ರೀ ಜೆ. ನರಸಿಂಹಸ್ವಾಮಿ : ಮಾನ್ಯ ಅಧ್ಯಕ್ಷರೆ, ನಾನು ಉಪ ವಿಭಾಗಕ್ಕೆ ಸಂಬಂಧಪಟ್ಟ ಹಾಗೆ ಪ್ರಶ್ನೆಯನ್ನು ಕೇಳಿದ್ದೇನೆ. ಅದರಲ್ಲಿ ದೊಡ್ಡಬಳ್ಳಾಪುರ, ದೇವನ ಹಳ್ಳಿ, ಹೊಸಕೋಟೆ ಮತ್ತು ನೆಲಮಂಗಲ, ನಾಲ್ಕು ತಾಲ್ಲೂಕುಗಳು ಬರುತ್ತದೆ. ಅದಕ್ಕೆ ಹೊಸಕೋಟೆಯ ಎಂ.ಎಲ್.ಎ.ಗಳು ಪ್ರಶ್ನೆಯನ್ನು ಕೇಳುತ್ತಿದ್ದಾರೆ.

ಶ್ರೀ ಎಂ.ಟಿ.ಬಿ. ನಾಗರಾಜು : ಮಾನ್ಯ ಅಧ್ಯಕ್ಷರೆ, ಅದಕ್ಕೆ ನಾನು ಮಾತನಾಡುತ್ತಿದ್ದೇನೆ. ಇಲ್ಲಿ ನಾಲ್ಕು ತಾಲ್ಲೂಕುಗಳು ಬಂದಿದೆ, ಒಟ್ಟಾರೆ ಒಂದು ಸಬ್ ಡಿವಿಜನ್ ಬಂದಿದೆ. ತಾವು ನಮಗೆ ಮಾತನಾಡಲು ಒಂದು ನಿಮಿಷ ಅವಕಾಶವನ್ನೂ ಹೊಸ ಶಾಸಕರಿಗೆ ಕೊಡುವುದಿಲ್ಲ. ನಾವು ಮಾತನಾಡಲು ಎದ್ದ ತಕ್ಷಣವೇ ಕುಳಿತುಕೊಳ್ಳಿ ಎಂದು ಹೇಳುತ್ತೀರಿ. ನಮ್ಮ ತಾಲ್ಲೂಕಿನ ವಿಚಾರ ಬಂದಾಗ ನಾವು ಒಂದು ನಿಮಿಷ ಮಾತನಾಡದೇ ಹೋದರೆ ಹೇಗೆ?

ಅಧ್ಯಕ್ಷರು : ಇದು ಶ್ರೀ ಜೆ. ನರಸಿಂಹಸ್ವಾಮಿಯವರ ಪ್ರಶ್ನೆಯಾಗಿದೆ. ಅದಕ್ಕೆ ಮಾನ್ಯ ಮಂತ್ರಿಯವರು ಉತ್ತರವನ್ನು ಕೊಟ್ಟರು. ಅದಕ್ಕೆ ಮಾನ್ಯ ಸದಸ್ಯರು ತಕ್ಷಣ ನಿಂತುಕೊಂಡು ಉಪ ಪ್ರಶ್ನೆಯನ್ನು ಕೇಳಲಿಲ್ಲ. ಅದಕ್ಕೆ ನಾನು ಮುಂದಿನ ಪ್ರಶ್ನೆಗೆ ಹೋಗಿದ್ದೇನೆ. ಇದು ಆದಮೇಲೆ ನೀವು ನಿಂತುಕೊಂಡು, ಈ ವಿಷಯ ನನಗೂ ಸಂಬಂಧವಿದೆಯೆಂದು ಹೇಳಿದರೆ ಹೇಗೆ?

ಶ್ರೀ ಎಂ.ಟಿ.ಬಿ. ನಾಗರಾಜು : ಮಾನ್ಯ ಅಧ್ಯಕ್ಷರೆ, ಈ ಸಬ್ ಡಿವಿಜನ್‌ನ ನಾಲ್ಕು ತಾಲ್ಲೂಕಿನ ಮಾಹಿತಿಗಳನ್ನು ಕೊಡಬೇಕು. ಈ ನಾಲ್ಕು ತಾಲ್ಲೂಕಿನಲ್ಲಿ ಎಷ್ಟೆಷ್ಟು ಭೂಮಿ ಯಾವ ವರ್ಷಗಳಲ್ಲಿ ಮಾರಾಟವಾಗಿದೆಯೆಂದು ಉತ್ತರವನ್ನು ಕೊಟ್ಟಿದ್ದಾರೆ. ನಮ್ಮ ತಾಲ್ಲೂಕಿನಲ್ಲಿ 98 ಎಕರೆ ಮಾರಾಟವಾಗಿದೆಯೆಂದು, ಹೇಳಿದಾಗ, ನಮಗೂ ಅದೇ ರೀತಿಯಲ್ಲಿ ಆಗಿದೆ. ಇಲ್ಲಿ ಎರಡು ಎಕರೆಗೆ ಪರ್ಮಿಷನ್ ಅನ್ನು ತೆಗೆದುಕೊಂಡು ನೂರಾರು ಎಕರೆ ಭೂಮಿ, ಅದೂ ಹರಿಜನರಿಗೆ ಸಂಬಂಧಪಟ್ಟಿರುವಂಥಾದ್ದು ಮಾರಾಟ ಆಗಿದೆ. ಇದು ಯಾವ ರೀತಿಯಾಗಿದೆಯೆಂದು ಅಧಿಕಾರಿಗಳಿಂದ ಮಾಹಿತಿಯನ್ನು ತರಿಸಿಕೊಂಡು ಇದರಲ್ಲಿ ಏನು ಅವ್ಯವಹಾರ ಆಗಿದೆಯೆಂಬುದನ್ನು ನೋಡಿ, ಮಾನ್ಯ ಮಂತ್ರಿಯವರು ಇದರ ಬಗ್ಗೆ ಸೂಕ್ತ ಕ್ರಮವನ್ನು ಜರುಗಿಸಬೇಕು.

ಶ್ರೀ ಜಗದೀಶ್ ಶೆಟ್ಟರ್ : ಮಾನ್ಯ ಅಧ್ಯಕ್ಷರೆ, ಮಾನ್ಯ ಹೊಸಕೋಟೆಯ ಶಾಸಕರು ಇವತ್ತು ನಮ್ಮ ತಾಲ್ಲೂಕಿನಲ್ಲಿ ಈ ರೀತಿಯ ಘಟನೆಗಳು ಆಗಿವೆಯೆಂದೂ, ಇಲ್ಲಿ ಕೇವಲ ಎರಡು ಎಕರೆಗೆ ಪರ್ಮಿಷನ್ ಅನ್ನು ತೆಗೆದುಕೊಂಡು 50 ಎಕರೆ, 100 ಎಕರೆ ಜಮೀನನ್ನು, ಮಾರಾಟ ಮಾಡಿದ್ದಾರೆಂಬ ವಿಷಯವನ್ನು ನನ್ನ ಗಮನಕ್ಕೆ ಈಗ ತಂದಿದ್ದಾರೆ. ಇವರೂ ಸಹಿತ ಸ್ಪಷ್ಟವಾಗಿ ಆ ಸರ್ವೆ ನಂಬರ್ ಅನ್ನು ನನಗೆ ಕೊಟ್ಟರೆ, ಇದರಲ್ಲಿ ಯಾವ ಅಧಿಕಾರಿಗಳು ಶಾಮೀಲು ಆಗಿದ್ದಾರೆ, ಯಾರು ಈ ಪ್ರಕರಣದಲ್ಲಿ ಶಾಮೀಲು ಆಗಿದ್ದಾರೆ, ಅವರ ಮೇಲೆ ನಿರ್ದಾಕ್ಷಿಣ್ಯವಾಗಿ ಕ್ರಮವನ್ನು ತೆಗೆದುಕೊಳ್ಳುತ್ತೇನೆ. ಇಂತಹ ಪ್ರಕರಣಗಳು ಯಾವುದೆಂದು ಆ ಸರ್ವೆ ನಂಬರ್ ಅನ್ನು ಕೊಟ್ಟರೆ, ನಾನು ಖಂಡಿತವಾಗಿಯೂ ಕ್ರಮವನ್ನು ತೆಗೆದುಕೊಳ್ಳುತ್ತೇನೆ.

ಶ್ರೀ ಜೆ. ನರಸಿಂಹಸ್ವಾಮಿ : ಮಾನ್ಯ ಅಧ್ಯಕ್ಷರೆ, ನಾನು ಈ ವಿಚಾರದ ಬಗ್ಗೆ ಮಾನ್ಯ ಕಂದಾಯ ಮಂತ್ರಿಯವರ ಗಮನವನ್ನು ಸೆಳೆಯುತ್ತಿದ್ದೇನೆ. ಅಲ್ಲಿ ಏನು ಆಗಿದೆಯೆಂಬ ಬಗ್ಗೆ ಸ್ಪಷ್ಟವಾದ ಮಾಹಿತಿಯನ್ನು ಕೊಡುವ ಪ್ರಯತ್ನ ಮಾಡುತ್ತೇನೆ. ಆದರೂ ಮಾನ್ಯ ಮಂತ್ರಿಯವರೂ ಕೂಡ ತಮ್ಮ ಅಧಿಕಾರಿಗಳ ಒಂದು ಎನ್‌ಕ್ವೈರಿ ಕಮಿಟಿಯನ್ನು ಮಾಡಿ ಎನ್‌ಕ್ವೈರಿ ಮಾಡಿಸಿ. ನಮ್ಮ ತಾಲ್ಲೂಕಿನಲ್ಲಿ ಬಹಳಷ್ಟು ಹಗರಣಗಳು ನಡೆದಿವೆ. ಇದರ ಜೊತೆಗೆ ಕೆರೆಗೆ 30 ಎಕರೆಯನ್ನು ಸರ್ಕಾರದವರೆ ಕಣ್ಣುಮುಚ್ಚಿಕೊಂಡು ಕೊಟ್ಟಿದ್ದಾರೆ. ಮೊನ್ನೆ 30ನೇ ತಾರೀಖಿನಂದು ಜಿಲ್ಲಾ ಪಂಚಾಯತ್‌ನಲ್ಲಿ resolution ಆಗಿದೆ. ತಾವು ಅದನ್ನು ತರಿಸಿಕೊಂಡು ನೋಡಿ. ಇದು ಪತ್ರಿಕೆಯಲ್ಲೂ ವರದಿ ಬಂದಿದೆ.

ಶ್ರೀ ಜಗದೀಶ್ ಶೆಟ್ಟರ್ : ಮಾನ್ಯ ಅಧ್ಯಕ್ಷರೆ, ನಾನು ಸರ್ಕಾರದ ಕಡೆ ಇರುವಂಥ ಮಾಹಿತಿಯಿಂದ ನಾನು ಈ ಅಂಕಿಸಂಖ್ಯೆಗಳನ್ನು ಕೊಟ್ಟಿದ್ದೇನೆ. ಈಗ ಅವರು ನೀವು 19, 20 ಎಕರೆಗೆ

ಪರ್ಮಿಷನ್ ಕೊಟ್ಟಿರುವಂಥಾದ್ದು. ಆದರೆ ಇಲ್ಲಿ ನೂರಾರು ಎಕರೆ ಭೂಮಿ ಮಾರಾಟವಾಗಿದೆಯೆಂದು ಹೇಳುತ್ತಿದ್ದಾರೆ. ಇವತ್ತು ನಮ್ಮ ರೆಕಾರ್ಡ್‌ನಲ್ಲಿ ಇದು ಇರುವಂಥಾದ್ದು ನಮ್ಮ ಅಧಿಕಾರಿಗಳ ಮಟ್ಟದಲ್ಲಿ ಇದನ್ನು ಎನ್‌ಕ್ವೈರಿಯನ್ನು ಮಾಡಿಸುತ್ತೇನೆ. ನಮ್ಮ ಕಡೆಯಿಂದಲೂ ಮಾಹಿತಿಗಳನ್ನು ತೆಗೆದುಕೊಂಡು ಮಾಡುತ್ತೇನೆ. ಮಾನ್ಯ ಸದಸ್ಯರಲ್ಲಿ ಅಷ್ಟೊಂದು ಮಾಹಿತಿ ಇದ್ದರೆ ಸರ್ವೆ ನಂಬರ್ ಅನ್ನು ಹೇಳಿದರೆ ನಾನು ಇಮ್ಮೀಡಿಯಟ್ ಆಗಿ ಆ್ಯಕ್ಷನ್ ಅನ್ನು ತೆಗೆದುಕೊಳ್ಳಲು ಸಾಧ್ಯವಾಗುತ್ತದೆಂದು ಹೇಳುತ್ತೇನೆ. ತಾವು ತಮ್ಮ ಕಡೆ ಇರುವ ಮಾಹಿತಿಯನ್ನು ಕೊಡಲಿ, ನಾನು ನಮ್ಮ ಕಡೆಯಿಂದ ಏನೆಂದು ವಿಚಾರ ಮಾಡುತ್ತೇನೆ.

ಅಧ್ಯಕ್ಷರು : ಆಯಿತು, ಮಾನ್ಯ ಐವಾನ್ ನಿಗ್ಲಿಯವರ ಪ್ರಶ್ನೆ, ಈಗ ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆಗೆ ಹೋಗಿದೆ. ಈ ಇಲಾಖೆಗೆ ಸಂಬಂಧಪಟ್ಟ ಮಂತ್ರಿಯವರು ಉತ್ತರವನ್ನು ಕೊಡುತ್ತಾರೆ.

ಶ್ರೀ ಐವಾನ್ ನಿಗ್ಲಿ : ಮಾನ್ಯ ಅಧ್ಯಕ್ಷರೆ, ಈ ಬಯೊ ಫ್ಲೂಯಲ್ ಯಾವ ಡಿಪಾರ್ಟ್‌ಮೆಂಟ್‌ಗೆ ಸಂಬಂಧಪಟ್ಟಿದೆಯೆಂಬುದನ್ನು ಹೇಳಬೇಕು.

ಅಧ್ಯಕ್ಷರು : ಈಗ ಈ ಪ್ರಶ್ನೆ ವಾಣಿಜ್ಯ ಮತ್ತು ಕೈಗಾರಿಕೆಯ ಇಲಾಖೆಗೆ ಸಂಬಂಧ ಪಟ್ಟಿದೆಯೆಂದು ಟ್ರಾನ್ಸ್‌ಫರ್ ಆಗಿದೆ. ಆ ಸಚಿವರು ಉತ್ತರವನ್ನು ಕೊಡುತ್ತಾರೆ.

ಶ್ರೀ ಐವಾನ್ ನಿಗ್ಲಿ : ಮಾನ್ಯ ಅಧ್ಯಕ್ಷರೆ, ನನಗೆ ಉತ್ತರವನ್ನು ಕೊಡಲು ಒಂದು ಡೇಟ್ ಅನ್ನು ಕೊಡಬೇಕು.

ಅಧ್ಯಕ್ಷರು : ಈ ಪ್ರಶ್ನೆ ವಾಣಿಜ್ಯ ಮತ್ತು ಕೈಗಾರಿಕೆಯ ಇಲಾಖೆಯಿಂದ, ಇದು ಕೃಷಿ ಮತ್ತು ತೋಟಗಾರಿಕೆ ಇಲಾಖೆಗೆ ಟ್ರಾನ್ಸ್‌ಫರ್ ಆಗಿದೆ. ಆ ಸಚಿವರು ಉತ್ತರವನ್ನು ಕೊಡುವಾಗ ತಮ್ಮ ಪ್ರಶ್ನೆಗೂ ಉತ್ತರವನ್ನು ಕೊಡುತ್ತಾರೆ. ಈಗ ತಾವು ಕುಳಿತುಕೊಳ್ಳಿ.

(ಪ್ರಶ್ನೆ: 203(1109)ಕ್ಕೆ ಸಂಬಂಧಪಟ್ಟ ಮಾನ್ಯ ಸದಸ್ಯರು ಸಭೆಯಲ್ಲಿ ಹಾಜರಿರಲಿಲ್ಲ)

ಅಧ್ಯಕ್ಷರು : ಮಾನ್ಯ ಎಸ್.ಎಸ್. ಪಾಟೀಲ್‌ರವರೆ, ತಮ್ಮ ಪ್ರಶ್ನೆಗೆ ಮಾಹಿತಿಯನ್ನು ಪಡೆಯಬೇಕಾಗಿದೆಯೆಂದು, ಮಾನ್ಯ ಉಪ ಮುಖ್ಯಮಂತ್ರಿಯವರು ಕಾಲಾವಕಾಶವನ್ನು ಕೇಳಿದ್ದಾರೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ನಾನು ಉತ್ತರವನ್ನು ಮುಂದಿನ ವಾರ ಕೊಡುವ ವ್ಯವಸ್ಥೆ ಮಾಡುತ್ತೇನೆ.

ಶ್ರೀ ಎಸ್.ಎಸ್. ಪಾಟೀಲ್ : ಮಾನ್ಯ ಅಧ್ಯಕ್ಷರೆ, ಮುಂದಿನ ವಾರ ಉತ್ತರವನ್ನು ಕೊಡುತ್ತೇನೆಂದು ಹೇಳಿದ್ದಾರೆ. ನಿಮ್ಮನ್ನು ನಾನು ಏನೂ ಮಾಡಲು ಆಗುವುದಿಲ್ಲ. ಇಲ್ಲಿ ಮಾರ್ಚ್ ತಿಂಗಳಲ್ಲಿ ಮಾಹಿತಿಯನ್ನು ಕೇಳಿರುವಂಥಾದ್ದು, ಅಂದ ಮೇಲೆ ಏಪ್ರಿಲ್, ಮೇ, ಜೂನ್ ತಿಂಗಳಲ್ಲಿ ನಿಮ್ಮ ಅಧಿಕಾರಿಗಳು ಏನು ಮಾಡುತ್ತಿರುತ್ತಾರೆ? ನನಗೆ ಏನೂ ತಕರಾರು ಇಲ್ಲ, ನೀವು ಮುಂದಿನ ವಾರ ಕೊಟ್ಟರೂ ಅಷ್ಟೆ, ಈಗ ಕೊಟ್ಟರೂ ಅಷ್ಟೆ. ಆದರೆ ಇವರಲ್ಲಿ ಮೂರು ತಿಂಗಳದ್ದು ಲೆಕ್ಕವಿಲ್ಲ. ಇಲ್ಲಿ ಲೆಕ್ಕವಿಲ್ಲದ ಸರ್ಕಾರ ನಡೆಯುತ್ತಿದೆ. ಇದು ಏನೂ ದೊಡ್ಡ ಪ್ರಶ್ನೆ ಅಲ್ಲ.

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಅಧ್ಯಕ್ಷರೆ, ಮುಂದಿನ ವಾರದಲ್ಲೇ ಈ ಅಧಿವೇಶನದಲ್ಲಿ ವಿವರವಾದ ಉತ್ತರವನ್ನು ಕೊಡುತ್ತೇನೆ.